ಸಿ.ಮಿಸ್ 81/2026

ಪಿ.ಡಬ್ಲ್ಯೂ: 01.

ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ವಿ ಆರ್ ಬಿ  ವಕೀಲರಿಂದಃ**

ನಾನು ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ. ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈಗಾಗಲೇ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

1. ಅಲಭ್ಯ ಪ್ರಮಾಣ ಪತ್ರ ನಿಪಿ-1 ಎಂದು,
2. ವಂಶವೃಕ್ಷ ನಿಪಿ-2 ಎಂದು,
3. ಆಧಾರ್ ಕಾರ್ಡ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-3 ಎಂದು,
4. ದಿನಾಂಕಃ 19.02.2026 ರ Times of Karnataka ದಿನಪತ್ರಿಕೆಯನ್ನು  ನಿಪಿ-4 ಎಂದು, ಪ್ರಕಟಣೆಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿರುವಂತೆ ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಏಕಪಕ್ಷೀಯವಾಗಿದ್ದರಿಂದ ಪಾಟೀ ಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.